ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**324**
ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	03-02-2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಪ್ರಸ್ತುತ ಹಾಗೂ ಮುಂದಿನ 3 ವರ್ಷಗಳ ಕಾಲ ಯಾವ ರೀತಿಯ ಋತುಮಾನವನ್ನು ವೈಜ್ಞಾನಿಕವಾಗಿ ಅಂದಾಜಿಸಲಾಗಿದೆ; (ವಿವರ ಒದಗಿಸುವುದು)	ಪ್ರಸ್ತುತ ಸಾಲಿನ ಮುಂಗಾರು ಋತುವಿಗೆ ಮೇ ತಿಂಗಳಲ್ಲಿ ಮತ್ತು ಹಿಂಗಾರು ಋತುವಿಗೆ ಸೆಪ್ಟೆಂಬರ್ ತಿಂಗಳಲ್ಲಿ ಮುನ್ಸೂಚನೆಯನ್ನು ವೈಜ್ಞಾನಿಕವಾಗಿ ನೀಡಬಹುದಾಗಿದೆ. ಮುಂದಿನ 3 ವರ್ಷಗಳ ಅವಧಿಗೆ ವೈಜ್ಞಾನಿಕವಾಗಿ ಋತುಮಾನಗಳನ್ನು ಅಂದಾಜಿಸಲು ಯಾವುದೇ ಹವಾಮಾನ ಮುನ್ಸೂಚನೆ ಮಾದರಿಗಳು ಲಭ್ಯವಿರುವುದಿಲ್ಲ.
(ಆ) ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಉಂಟಾದಲ್ಲಿ ಯಾವ ರೀತಿಯ ಸಿದ್ಧತೆಗಳನ್ನು ಸರ್ಕಾರ ಹೊಂದಿದೆ; ಈ ಬಗ್ಗೆ ಸರ್ಕಾರದ ಚೆಕ್ ಲೀಸ್ಟ್ ಗಳೇನು;	• ಅತಿವೃಷ್ಟಿ ಗುರುತಿಸುವಲ್ಲಿ ಗ್ರಾಮ ಪಂಚಾಯತಿವಾರು ಅಳವಡಿಸಿರುವ ಮಳೆಮಾಪನ ಕೇಂದ್ರಗಳಿಂದ ನಿಜಸಮಯದ ಮಳೆ ಮಾಹಿತಿಯನ್ನು ವಿಶ್ಲೇಶಿಸಿ ಅತಿವೃಷ್ಟಿ ವರದಿ ಸಿದ್ಧಪಡಿಸಲಾಗುತ್ತದೆ.
(ಇ) ನಾಗರೀಕ ಸಿದ್ಧತೆ ಬಗ್ಗೆ ಅನುಸರಿಸಬೇಕಾಗಿರುವ ವಿಧಿ-ವಿಧಾನಗಳೇನು;	• ಪ್ರಕೃತಿ ವಿಕೋಪಗಳ ತುರ್ತು ನಿರ್ವಹಣೆಗೆ ತಾಲ್ಲೂಕು ನೋಡಲ್ ಅಧಿಕಾರಿಗಳನ್ನು ಹಾಗೂ ಗ್ರಾಮ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ತುರ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. • ಪ್ರಕೃತಿ ವಿಕೋಪದ ಸಂದರ್ಭದಲ್ಲಿ NDRF ತಂಡಗಳನ್ನು ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿಗಳನ್ನು ತಕ್ಷಣ ನಿಯೋಜಿಸಿ, ತುರ್ತು ಪರಿಹಾರ ಕಾರ್ಯ ಕೈಗೊಂಡು ಸಂತ್ರಸ್ಥ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತದೆ. • ಪ್ರವಾಹದಂತಹ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸಂಕಷ್ಟಕ್ಕೊಳಗಾಗುವ ಸಂತ್ರಸ್ಥ ನಾಗರಿಕರಿಗೆ ಹತ್ತಿರದ ಸುರಕ್ಷಿತ ಸ್ಥಳಗಳಲ್ಲಿ ಕಾಳಜಿ ಕೇಂದ್ರಗಳನ್ನು ಸ್ಥಾಪಿಸಿ, ಆಹಾರ ಮತ್ತು ತಾತ್ಕಾಲಿಕ ವಸತಿ ಸೌಕರ್ಯ ಕಲ್ಪಿಸಲಾಗುತ್ತದೆ. • ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿದ್ದು, ಅಗತ್ಯ ಪರಿಕರಗಳನ್ನು ಸದಾ ಸನ್ನದ್ಧವಾಗಿರಿಸಿಕೊಂಡು ತಕ್ಷಣವೇ ಸ್ಪಂದಿಸುವಂತೆ ಸೂಚಿಸಲಾಗಿರುತ್ತದೆ. • ಪ್ರಕೃತಿ ವಿಕೋಪಗಳ ತುರ್ತು ನಿರ್ವಹಣೆಗಾಗಿ ಅಗತ್ಯ

	ಸಲಕರಣೆಗಳನ್ನು ಖರೀದಿಸಲು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಮತ್ತು ಎಲ್ಲಾ ಜಿಲ್ಲಾಡಳಿತಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅಗತ್ಯ ಅನುದಾನ ಒದಗಿಸಲಾಗಿದೆ.
(ಈ) ಪ್ರಾಣಿಗಳ ಬಗ್ಗೆ ಸಿದ್ಧತೆಗಳೇನು;	ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಭೂಕುಸಿತ ಮೊದಲಾದ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಮಾನವರಂತೆ ಪ್ರಾಣಿಗಳೂ ಸಹ ಸಂಕಷ್ಟಕ್ಕೆ ಈಡಾಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ತಂಡಗಳು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿಗಳು ಮತ್ತು ಸ್ಥಳೀಯ ನಾಗರಿಕರ ಸಹಾಯದಿಂದ ಪ್ರಾಣಿಗಳನ್ನು ರಕ್ಷಿಸಲಾಗುತ್ತದೆ. ಅಗತ್ಯಕ್ಕನುಸಾರವಾಗಿ ಗೋಶಾಲೆಗಳನ್ನು ತೆರೆದು, ಮೇವಿನ/ಆಹಾರದ ವ್ಯವಸ್ಥೆ ಕಲ್ಪಿಸಲಾಗುತ್ತದೆ.
(ಉ) ಇಲ್ಲಿಯವರೆಗೆ ಅನುಭವ ಕಲಿಸಿರುವ ಪಾಠಗಳೇನು? (ವಿವರ ನೀಡುವುದು)	ಈ ಹಿಂದಿನ ಅತಿವೃಷ್ಟಿ ಮತ್ತು ಅನಾವೃಷ್ಟಿ ಮೊದಲಾದ ಪ್ರಕೃತಿ ವಿಕೋಪಗಳಿಂದಾದ ಅನುಭವದಿಂದ ಎಚ್ಚೆತ್ತುಕೊಂಡಿರುವ ಸರ್ಕಾರವು 2020ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ಉಂಟಾದ ಅತಿವೃಷ್ಟಿ/ಪ್ರವಾಹವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಂಡಿರುತ್ತದೆ. • ರಾಜ್ಯದಲ್ಲಿ ಕೋವಿಡ್-19 ಪಿಡುಗಿನ ಹೊರತಾಗಿಯೂ, ರಾಜ್ಯದಲ್ಲಿನ 2020ರ ಮುಂಗಾರು ಹಂಗಾಮಿನ ಮಳೆ ಹಾಗೂ ಪ್ರವಾಹ ಪರಿಸ್ಥಿತಿ ಸನ್ನದ್ಧತೆಗಾಗಿ 2020ರ ಏಪ್ರಿಲ್ ತಿಂಗಳಿನಿಂದಲೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. • 2020ರ ಮುಂಗಾರು ಪೂರ್ವದಲ್ಲಿಯೇ ಸರ್ಕಾರದ ಹಂತದಲ್ಲಿ ಸಭೆಗಳನ್ನು ನಡೆಸಿ ಪೂರ್ವ ಸಿದ್ಧತೆಗಳ ಬಗ್ಗೆ ಅಗತ್ಯ ಕ್ರಮ ವಹಿಸಲಾಗಿದೆ. • ದೇಶದಲ್ಲಿಯೇ ಪ್ರಥಮ ಭಾರಿಗೆ ರಾಜ್ಯದ ಪ್ರವಾಹ ಪೀಡಿತ 13 ಜಿಲ್ಲೆಗಳ ಸುಮಾರು 912 ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಗ್ರಾಮ ಪಂಚಾಯಿತಿ ಮಟ್ಟದ ವಿಪತ್ತು ನಿರ್ವಹಣೆ ಯೋಜನೆಯಡಿ ಗ್ರಾಮ ಮಟ್ಟದ ಪ್ರವಾಹ ಸನ್ನದ್ಧತೆ ಕಾರ್ಯ ಕ್ರಮಗಳನ್ನು ರೂಪಿಸಲಾಗಿದೆ. ಈ ಯೋಜನೆಯಡಿ ಸಾರ್ವಜನಿಕರು ಪ್ರವಾಹ ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ಗ್ರಾಮ ಮಟ್ಟದ ವಿಪತ್ತಿನ ತೀವ್ರತೆ, ಅಪಾಯ ತಗ್ಗಿಸುವಿಕೆ, ಸನ್ನದ್ಧತೆ, ಪ್ರತಿಕ್ರಿಯೆ ಕ್ರಮಗಳನ್ನು ಗುರುತಿಸಲಾಗಿದೆ. • ಎಸ್.ಡಿ.ಆರ್.,ಎಫ್ ತಂಡವನ್ನು ಬಲಪಡಿಸಲಾಗಿದೆ.

	• ಜಲಾಶಯಗಳ ನಿರ್ವಹಣೆ ಮತ್ತು ಪ್ರವಾಹ ಸಂದರ್ಭಗಳಲ್ಲಿ ಅಂತರ್ ರಾಜ್ಯ ಸಮನ್ವಯತೆ ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ. ಜಲಾಶಯಗಳಿಂದ ಹೊರಬಿಡಬೇಕಾಗುವ ನೀರಿನ ಪ್ರಮಾಣ ಹಾಗೂ ನದಿಪಾತ್ರಗಳಲ್ಲಿನ ಸಾಮರ್ಥ್ಯ, ಹಾಗೂ ಜಲಾಶಯಗಳಿಂದ ನೀರನ್ನು ಬಿಡುವ ಬಗ್ಗೆ, ನಿರಂತರ ಮುನ್ನೆಚರಿಕೆ ಹಾಗೂ ಮುಂಜಾಗ್ರತ ಸಂದೇಶಗಳನ್ನು ಜಲಾಶಯ ಮತ್ತು ನದಿ ವ್ಯಾಪ್ತಿಯ ಪ್ರದೇಶದ ಗ್ರಾಮಗಳಿಗೆ ನೀಡಿ, ನದಿ ಪಾತ್ರದ ಪ್ರದೇಶಗಳ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಬಹುದಾದ ಅಪಾರ ನಷ್ಟವನ್ನು ಗಣನೀಯವಾಗಿ ತಗ್ಗಿಸಲಾಯಿತು. • ರಾಜ್ಯದ ಬೆಳಗಾವಿ, ಧಾರವಾಡ, ದಕ್ಷಿಣ ಕನ್ನಡ, ಹಾಗೂ ಕೊಡಗು ಜಿಲ್ಲೆಗಳಲ್ಲಿ ಪೂರ್ವೋಚಿತ ಕ್ರಮವಾಗಿ ರಾಷ್ಟ್ರೀಯ ವಿಪತ್ತು ಕಾರ್ಯಾಚರಣೆ ತಂಡಗಳು, ರಾಜ್ಯ ವಿಪತ್ತು ಕಾರ್ಯಾಚರಣೆ ತಂಡ, ಅಗ್ನಿಶಾಮಕ, ತುರ್ತು ಸೇವೆ ಮತ್ತು 4 ಹೆಲಿಕಾಪ್ಟರ್ ಗಳನ್ನು ನಿಯೋಜಿಸುವ ಮೂಲಕ ಪ್ರವಾಹಕ್ಕೆ ತುತ್ತಾದ 136 ಗ್ರಾಮಗಳಿಂದ 43,158 ಜನರನ್ನು ಸ್ಥಳಾಂತರಿಸಲಾಯಿತು ಹಾಗೂ 5016 ಜನಗಳನ್ನು ರಕ್ಷಿಸಲಾಯಿತು.

ಕಂಇ 44 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು